3

# ದೇವರು ತನ್ನ ಜನರನ್ನು ವಿಮೋಚಿಸುತ್ತಾನೆ

## (ವಿಮೋಚನಕಾಂಡ 3 ಮತ್ತು 14)

ನಾವೆಲ್ಲರು "ಯಥಾ ಪ್ರಕಾರವಾದ" ದಿನವೆಂದು ಭಾವಿಸಿ, ದಿನವನ್ನು ಆರಂಭಿಸುವಾಗ, ಆ ದಿನ ನಡೆದ ಸಂಗತಿಯೇ ಬೇರೆಯಾಗಿರುತ್ತದೆ. ವಿಮೋಚನಾಕಾಂಡ 3ರಲ್ಲಿ ಮೋಶೆಗೆ ಆದ ಅನುಭವವು ಇದೇ ಆಗಿತ್ತು. ವಚನ 1 ರಲ್ಲಿ, ಮಿಧ್ಯಾನ್ಯರ ಪ್ರದೇಶದಲ್ಲಿ ಮೋಶೆಯು ತನ್ನ ಮಾವನ ಕುರಿಮಂದೆಯನ್ನು ಮೇಯಿಸುತ್ತಿರುವಾಗ, ಅಂದರೆ ಅವನು ಕಳೆದ ನಾಲ್ವತ್ತು ವರ್ಷಗಳಿಂದ ಇದನ್ನೇ ಮಾಡುತ್ತಿದ್ದನು, ಆ ಸಮಯದಲ್ಲಿ ಅಸಹಜವಾದ ಒಂದು ಘಟನೆಯು ನಡೆಯಿತು.

ಮೋಶೆಯು ಇಬ್ರಿಯನಾಗಿದ್ದು, ಅಬ್ರಹಾಮನ ವಂಶದಲ್ಲಿ ಜನಿಸಿದ್ದನು. ದೇವರ ವಾಗ್ದಾನ ದಂತೆ ಈ ಕುಟುಂಬವು ಬಹು ವಿಸ್ತರಣೆಗೊಂಡಿತ್ತು; ಆದರೆ ಅವರು ಐಗುಪ್ತದ ಅರಸನಾದ ಫರೋಹನನಿಗೆ ದಾಸರಾಗಿದ್ದರು. ದೇವರ ಮಧ್ಯವರ್ತಿಕೆಯಿಂದ ಮೋಶೆಯು ಫರೋಹ ನನ ಮನೆಯಲ್ಲಿ ಪೋಷಣೆಯನ್ನು ಹೊಂದಿದ್ದನು (ವಿಮೋಚನಕಾಂಡ 2:1-10), ಆದರೆ ಇಬ್ರಿಯನನ್ನು ಹೊಡೆದಿದ್ದ, ಐಗುಪ್ತದ ಆಳನ್ನು ಮೋಶೆಯು ಹೊಡೆದ ನಿಮಿತ್ತ ಐಗುಪ್ತವನ್ನು ಬಿಟ್ಟು ಪಲಾಯನ ಮಾಡಿದ್ದನು (ತನ್ನ ಜನರನ್ನು ಬಿಡಿಸಲು ಮಾಡಿದ ಸ್ವಪ್ರಯತ್ನ) (ಅಪೊಸ್ತಲರ ಕೃತ್ಯಗಳು 7:25). ಈ ಮೋಶೆಯು ಮಿಧ್ಯಾನ್ಯಕ್ಕೆ ಹೋಗಿ, ಮದುವೆ ಮಾಡಿಕೊಂಡು, ಕುರಿ ಕಾಯುವುದೇ ತನ್ನ ಕೆಲಸವಲ್ಲವೆಂದು ತಿಳಿದು ಸ್ತಂಭ್ದನಾಗಿದ್ದನು.

ಆದರೆ ದೇವರು, ಇನ್ನೊಂದು ಉಪಾಯವನ್ನು ಹೊಂದಿದ್ದನು. ಆ ಒಂದು ಅಸಹಜವಾದ ದಿನದಂದು, ತನ್ನ ಕುರಿಗಳನ್ನು ಮೋಶೆಯು ಕಾಯುತ್ತಿರುವಾಗ, ಒಂದು ಪೊದೆಯು ಉರಿಯುತ್ತಿದ್ದರೂ, ಅದು ಸುಟ್ಟು ಹೋಗದೆ ಇರುವದನ್ನು ಅವನು ಕಂಡನು. ಆಶ್ಚರ್ಯವನ್ನು ನೋಡಲು ಅವನು ಮುಂದಾದಾಗ, ಪೊದೆಯೊಳಗಿಂದ - ಮೋಶೆಯೇ, ಮೋಶೆಯೇ ಎಂದು ಕರೆದನು. ಆಗ ಮೋಶೆಯು ಅದು ಪರಿಶುದ್ಧವಾದ ಸ್ಥಳವೆಂದು ತಿಳಿದಾಗ, "ನಾನು ನಿನ್ನ ತಂದೆಯ ದೇವರು ಅಬ್ರಹಾಮನ ದೇವರು, ಇಸಾಕರ ದೇವರು, ಯಾಕೋಬನ ದೇವರು" ಎಂಬ ಸ್ವರವನ್ನು ಆಲಿಸಿದನು (3:6). ನಾವುಗಳು ಊಹಿಸುವದಾದರೆ, ಈ ಘಟನೆಯು ಮೋಶೆಯನ್ನು ಬದಲಿಸುವದು ಮಾತ್ರವಲ್ಲದೆ, ಆ ದಿವಸವನ್ನು ಹಾಗೂ ಅವನ ಪೂರ್ಣ ಜೀವಿತವನ್ನೇ ಬದಲಾಯಿಸಿತು - ಹೌದು ಇಸ್ರಾಯೇಲ್ಯರೆಲ್ಲರ ಜೀವಿತವನ್ನೇ ಬದಲಿಸುವ ಮೂಲವಾಯಿತು.

ಮೋಶೆಗೆ ದೇವರಿಂದಾದ ಯೋಜನೆಯನ್ನು ತಿಳಿಸಲಾಯಿತು: ಅವನು ಇಸ್ರಾಯೇಲ್ಯ ರನ್ನು ದಾಸತ್ವದಿಂದ ಬಿಡಿಸಿ ಅವರನ್ನು "ಉತ್ಕೃಷ್ಟವಾದ ದೇಶಕ್ಕೆ" (ಕಾನಾನಿಗೆ) ನಡಿಸುವವನು ಎಂಬದೆ. ಮೋಶೆಯು ದೇವರ ಸಂದೇಶವನ್ನು ಫರೋಹನನಿಗೆ ತಿಳಿಸುವ ಮೂಲಕ ಈ ಕಾರ್ಯವು ಆರಂಭಗೊಂಡಿತು: ಆ ಸಂದೇಶವೇನೆಂದರೆ, "ನನ್ನ ಜನರು ಬಿಡುಗಡೆಗೊಳ್ಳಲಿ" (ವಿಮೋಚನಕಾಂಡ 5:1; 8:1; 9:1 ನೋಡಿರಿ). ಈ ಯೋಜನೆಯ ನಿಮಿತ್ತ ಮೋಶೆ ಕಸಿವಿಸಿಗೊಂಡನು, ಆದ್ದರಿಂದ ಅವನು ಆ ಕೆಲಸಕ್ಕೆ ಯೋಗ್ಯನಲ್ಲ ಎಂಬ ಕಾರಣಗಳನ್ನು ನೀಡಿದನು. ಅಂತಿಮವಾಗಿ ದೇವರು ಅವನಿಗೆ ಆ ದೇಶವನ್ನು ಮಾಡಿ, ಹೀಗಿದ್ದರೂ ಮೋಶೆಯು ದೇವರು ಮುಂತಿಳಿಸಿದ ಪ್ರಕಾರ ಹೊರಟನು (4:21). ಫರೋಹನ ಹೃದಯವು ಕಠಿಣವಾಗಿ, ಅವನ ಮಾತಿಗೆ ಪ್ರತಿಕ್ರಿಯಿಸಲು ಸಮ್ಮತಿಸಲಿಲ್ಲ. ನಂತರದಲ್ಲಿ ದೇವರು ಹತ್ತು ವಿಧವಾದ

ಬಾಧೆಗಳನ್ನು ತಂದ ನಂತರ, ದೇವ ಜನರು ಹೊರಡಲು ಅರಸನು ಸಮ್ಮತಿಸಿದನು (ವಿಮೋಚನಕಾಂಡ 7-11). ಅದಾದ ನಂತರವು ಫರೋಹನು ತನ್ನ ಮನಸ್ಸನ್ನು ಕಠಿಣಮಾಡಿಕೊಂಡು ಇಸ್ರಾಯೇಲ್ಯರನ್ನು ಬೆನ್ನಟ್ಟಿದನು. ಅವರನ್ನು ಕೆಂಪು ಸಮುದ್ರದ ಬಳಿಯಲ್ಲಿ ಸಿಲುಕಿಸಿದನು. ದೇವರು ಆ ಸಮುದ್ರವನ್ನು ಇಬ್ಭಾಗ ಮಾಡಿ, ಜನರು ಅದರ ನಡುವೆ ಹಾದುಹೋಗುವಂತೆ ಮಾಡಿದನು. ಅಗಲೂ ಫರೋಹನನ್ನು ಇಸ್ರಾಯೇಲ್ಯರನ್ನು ಹಿಂದಟ್ಟಿದಾಗ, ಆ ಐಗುಪ್ತರನ್ನು ಹಾಗೂ ಅವರ ಸೈನ್ಯವನ್ನು ನೀರಿನ ಪ್ರವಾಹದಲ್ಲಿ ದೇವರು ಮುಳುಗಿಸಿದನು. "ಅವರು ಹೊರಗಡೆಗೆ ಹೊರಟು ಹೋದ" ಈ ಘಟನೆಯ ಸರಣಿಯನ್ನು "ವಿಮೋಚನೆ" ಅಂದರೆ ಗ್ರೀಕ್ ಭಾಷೆಯಲ್ಲಿ ಅದರ ಅರ್ಥ "ಹೊರಕ್ಕೆ ಹೋಗುವದು" ಎಂಬದೇ. ಇದು ಹಳೆ ಒಡಂಬಡಿಕೆಗೆ ಸೂಕ್ತವಾಗಿ "ಮುಖ್ಯ ಶೀರ್ಷಿಕೆಯಾಗಿದೆ" ವಿಮೋಚನೆ ಕಾಲದಲ್ಲಿ ಈ ಘಟನೆಗಳ ದಾಖಲುಗಳನ್ನು ಮಾಡಲಾಗಿದೆ.

"ವಿಮೋಚನೆ" ಘಟನೆಯು ಇಸ್ರಾಯೇಲ್ಯರ ಜೀವನ ಚರಿತ್ರೆಯಲ್ಲಿ ಅತಿ ಪ್ರಮುಖವಾದ ಘಟನಾವಳಿಯಾಗಿದೆ. ಆ ವಿಶೇಷ ಘಟನೆಯಿಂದ ದೇವರು ಇಸ್ರಾಯೇಲ್ಯರನ್ನು ಒಂದು ವಿಶೇಷ ಜನಾಂಗವನ್ನಾಗಿ ಮಾರ್ಪಡಿಸಿದನು. ಆ ದಿನದಿಂದ, ಅವರು ದೇವರಿಂದಲೇ ವಿಮೋಚನೆಗೊಂಡ ಜನರೆಂದು ಅರಿತುಕೊಂಡರು. ದೇವರು ಅವರನ್ನು ಪರಾಕ್ರಮದಿಂದಲೇ ಬಿಡಿಸಿದನೆಂದು ತಿಳಿದರು. ಈ ವಿಮೋಚನೆಯು ಹೊಸ ಒಡಂಬಡಿಕೆಯ ಯೇಸುವಿನ ಕ್ರೂಜೆ, ಹಾಗೆ ಪುನರುತ್ಥಾನಕ್ಕೆ ಸಮನಾಗಿದೆ. ಈ ಘಟನೆಗಳ ಮೂಲಕವಾಗಿಯೇ ಕ್ರೈಸ್ತರು ರಕ್ಷಣೆಯನ್ನು ಹಾಗೂ ತಾವುಗಳು ದೇವ ಜನರೆಂಬ ಬಿರುದನ್ನು ಹೊಂದಿದ್ದಾರೆ.

ಹಾಗೂ ಈ ವಿಮೋಚನೆಯ ನಿಮಿತ್ತ ಇಸ್ರಾಯೇಲ್ಯರು, ದೇವರು ಯಾರು ಎಂಬುದನ್ನು ಸಹ ಸಾಭೀತುಪಡಿಸಿದರು. ಅವರು 430 ವರ್ಷಗಳ ಕಾಲ ದಾಸತ್ವದಲ್ಲಿ ಇದ್ದಾಗ ಅವರು ತಮ್ಮ ದೇವರ ಸಂಪರ್ಕವನ್ನು ಕಡಿದುಕೊಂಡಿದ್ದರು. ಅವರು ಒಂದು ಅನ್ಯ ಪರಿಸರದಲ್ಲಿ ಜೀವಿಸುತ್ತಾ, ದೇವರಿಂದ ಯಾವುದೇ ದೇವಾಲಯಗಳು ಇರಲಿಲ್ಲ, ಹಾಗೂ ಅವರಿಗೆ ಮಾರ್ಗದರ್ಶನ ನೀಡಲು ಯಾವುದೇ ಯಾಜಕರುಗಳು ಇರಲಿಲ್ಲ. ಮೋಶೆಯನ್ನು ಅವರ ಬಳಿಗೆ ಕಳುಹಿಸಿದವನು ಯಾರು ಎಂದು ಜನರು ತಿಳಿಯಲು ಅಸಾಧ್ಯವಾಗಿದ್ದರಿಂದ ಮೋಶೆಯು ಅವರ ಬಳಿಗೆ ಹೋಗಲು ಹಿಂಜರಿದಿದ್ದನು (ವಿಮೋಚನಕಾಂಡ 3:13). ಈ ವಿಮೋಚನೆಯ ನಿಮಿತ್ತ ಇಸ್ರಾಯೇಲ್ ಜನರು ತಮ್ಮ ದೇವರ ಸದ್ಗುಣಗಳನ್ನು ಅರಿಯಲು ಸಾಧ್ಯವಾಯಿತು:

> ಆ ದಿನದಲ್ಲಿ ಯೆಹೋವನು ಇಸ್ರಾಯೇಲ್ಯರನ್ನು ಐಗುಪ್ತರ ಕೈಗೆ ತಪ್ಪಿಸಿದನು. ಐಗುಪ್ತರು ಸತ್ತು ಸಮುದ್ರ ತೀರದಲ್ಲಿ ಬಿದ್ದಿರುವದ್ನು ಇಸ್ರಾಯೇಲ್ಯರು ಕಂಡರು. ಯೆಹೋವನು ಐಗುಪ್ತ್ಯರಲ್ಲಿ ಮಾಡಿದ ಈ ಪರಾಕ್ರಮಕಾರ್ಯವನ್ನು ಇಸ್ರಾಯೇಲ್ಯರು ನೋಡಿ ಯೆಹೋವನಿಗೆ ಭಯಪಟ್ಟು ಆತನಲ್ಲಿಯೂ ಆತನ ಸೇವಕನಾದ ಮೋಶೆಯಲ್ಲಿಯೂ ನಂಬಿಕೆಯಿಟ್ಟರು (ವಿಮೋಚನಕಾಂಡ 14:30, 31).

## ತನ್ನ ಮಾತನ್ನು ನೆರವೇರಿಸುವ ದೇವರು

ಇಸ್ರಾಯೇಲ್ಯರು ದಾಸತ್ವಕ್ಕೆ ಸಿಲುಕಿ ನಂತರ ಬಿಡುಗಡೆ ಹೊಂದಿದರು ಎಂಬುದು ಇದೇ ಮೊದಲ ದಾಖಲೆಯಾಗಿರುವದಿಲ್ಲ. ದೇವರು ಅಬ್ರಹಾಮನೊಂದಿಗೆ ಒಡಂಬಡಿಕೆಯನ್ನು ಮಾಡಿದ ಸಮಯದಲ್ಲಿಯೇ ಈ ಘಟನೆಯು ಆಗುವದು ಎಂದು ದೇವರು ಮುಂದಾಗಿಯೇ ತಿಳಿಸಿದ್ದನು:

> … ಆಗ ಯೆಹೋವನು ಅವನಿಗೆ - ನೀನು ಚೆನ್ನಾಗಿ ತಿಳಿಯತಕ್ಕದ್ದೇನಂದರೆ - ನಿನ್ನ ಸಂತತಿಯವರು ಅನ್ಯದೇಶದಲ್ಲಿ ಕೆಲವು ಕಾಲ ವಾಸವಾಗಿದ್ದು ಆ ದೇಶದವರಿಗೆ ದಾಸರಾಗುವರು. ನಾನೂರು ವರುಷ ಆ ದೇಶದವರಿಂದ ಬಾಧೆಪಡುವರು. ಅವರಿಂದ ಬಿಟ್ಟೀ

> ಕೆಲಸ ಮಾಡಿಸಿಕೊಂಡ ಜನಾಂಗವನ್ನು ನಾನು ಶಿಕ್ಷಿಸಿದ ನಂತರ ಅವರು ಬಹಳ ಆಸ್ತಿವಂತರಾಗಿ ಆ ದೇಶದಿಂದ ಬಿಡುಗಡೆಯಾಗಿ ಬರುವರು (ಆದಿಕಾಂಡ 15:13, 14).

ಎಲ್ಲಿಯವರೆಗೆ ದೇವರು ಇಸ್ರಾಯೇಲ್ಯರನ್ನು ಮರೆತಿರಲಿಲ್ಲವೋ, ಅಲ್ಲಿಯವರೆಗೆ ಅವರು ದಾಸರಾಗಿರುವದು ಅಸಾಧ್ಯವಾಗಿತ್ತು. ದೇವರು ಅವರನ್ನು ಮುಕ್ತಗೊಳಿಸುವನು ಎಂಬ ವಾಗ್ದಾನವನ್ನು ಮರೆತಿರಲಿಲ್ಲ.

> ಈ ಮೇರೆಗೆ ಬಹಳ ದಿನಗಳು ಕಳೆದ ಮೇಲೆ ಐಗುಪ್ತ ದೇಶದ ಅರಸನು ಸತ್ತನು. ಇಸ್ರಾಯೇಲ್ಯರು ತಾವು ಮಾಡಬೇಕಾದ ಬಿಟ್ಟೀಕೆಲಸಕ್ಕಾಗಿ ನಿಟ್ಟುಸುರು ಬಿಟ್ಟು ಗೋಳಾಡುತ್ತಾ ಇದ್ದರು. ಆ ಗೋಳು ದೇವರಿಗೆ ಮುಟ್ಟಿತು. ದೇವರು ಅವರ ನರಳಾಟ ವನ್ನು ಕೇಳಿ ತಾನು ಅಬ್ರಹಾಮ ಇಸಾಕ ಯಾಕೋಬರಿಗೆ ಮಾಡಿದ ವಾಗ್ದಾನವನ್ನು ನೆನಪಿಗೆ ತಂದುಕೊಂಡು ಇಸ್ರಾಯೇಲ್ಯರನ್ನು ನೋಡಿ ಅವರಲ್ಲಿ ಲಕ್ಷ್ಯವಿಟ್ಟನು (ವಿಮೋ ಚನಕಾಂಡ 2:23-25).

ಜನರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವದು ದೇವರ ಸಹಜವಾದ ಸ್ವಭಾವವಾಗಿದೆ, ಒಬ್ಬ ಬರಹಗಾರನು ಆತನನ್ನು "ಮುಂದುವರೆಸುವ ದೇವರು" ಎಂದು ಬಣ್ಣಿಸಿದ್ದಾರೆ.[1] ಬಹುಶಃ ಇಸ್ರಾಯೇಲ್ಯರು ತಮ್ಮ ದೇವರನ್ನು ಮರೆತುಬಿಟ್ಟಿರಬಹುದು, ಆದರೆ ಆತನು ಅವರನ್ನು ಮರೆತಿರಲಿಲ್ಲ. ಅಬ್ರಹಾಮನೊಂದಿಗೆ ಮಾಡಿಕೊಂಡಿದ್ದ ವಾಗ್ದಾನವನ್ನು ದೇವರು ನೆರವೇರಿ ಸಿದ್ದನು.

ಚಪಲ ಚಿತ್ತರಂತೆ ಅಥವಾ ಮರಗುಳಿಗಳಂತೆ, ದೇವರು ತನ್ನ ವಾಗ್ದನಗಳನ್ನು ಮೆಯುವದೇ ಇಲ್ಲ. ಇದು ದೇವರ ಕುರಿತ ಪ್ರಮುಖವಾದ ಸಂಗತಿಯಾಗಿದೆ. ಮಲಾಕಿ 3:6ರಲ್ಲಿ, "ಆದರೂ ಕರ್ತನಾದ ನಾನು ಮಾರ್ಪಟ್ಟಿಲ್ಲ; ಆದ್ದರಿಂದ ಯಾಕೋಬ ಸಂತತಿಯವರೇ ನೀವು ನಾಶವಾಗಲಿಲ್ಲ" ಎಂದು ಬರೆದದೆ. "ಹಳೆ ಒಡಂಬಡಿಕೆಯ ಅಂತ್ಯದಲ್ಲಿ, ಈ ಸಂಗತಿಯು ನೆನಪಿಡುವಂಥದ್ದಾಗಿದೆ. ಆದ್ದರಿಂದ ಹಳೆ ಮತ್ತು ಹೊಸ ಒಡಂಬಡಿಕೆಯ ದೇವರಲ್ಲಿ ಯಾವದೇ ವ್ಯತ್ಯಾಸಗಳು ಇರುವದಿಲ್ಲ." ದೇವರು ತಾನು ಹೇಳಿರುವ ವಾಕ್ಯಕ್ಕನುಗುಣವಾಗಿಯೇ ಇರುವನು, ಹಳೆ ಒಡಂಬಡಿಕೆಯ ಮಾತುಗಳು, ಹೊಸ ಒಡಂಬಡಿಕೆಯಲ್ಲಿರುವ ಕ್ರಿಸ್ತನಿಗೆ ಸೇರಿದ ಜನರಿಗೂ ಸಂಬಂಧ ಪಟ್ಟದ್ದಾಗಿರುತ್ತದೆ. ಆದ್ದರಿಂದ ಹೊಸ ಒಡಂಬಡಿಕೆಯು, "ಯೇಸು ಕ್ರಿಸ್ತನು ನೆನ್ನೆ ಇದ್ದ ಹಾಗೆ ಈ ಹೊತ್ತು ಇದ್ದಾನೆ, ನಿರಂತರವೂ ಹಾಗೆಯೇ ಇರುವನು" (ಇಬ್ರಿಯ 13:8) ಎನ್ನುತ್ತದೆ. ಅವನು ಈ ಹಿಂದೆ ಹೇಳಿರುವ ಮಾತಿನಂತೆ ಇರುವನೋ ಅಥವಾ ಇಲ್ಲವೋ ಎಂಬ ಸಂಶಯದಲ್ಲಿ ಜೀವಿಸುವದು ಅನಗತ್ಯವಾಗಿದೆ. ಅಥವಾ ದೇವರು ಚಂಚಲನಾಗಿದ್ದಾನೆ ಆತನನ್ನು ನಾವು ಮೆಚ್ಚಿಸಲು ಅಸಾಧ್ಯ ಎಂದು ತಿಳಿಯಬಾರದು. ದೇವರು ಯಾವಾಗಲೂ ತನ್ನ ಮಾತನ್ನು ನೆರವೇರಿಸುತ್ತಾನೆ. ಹಾಗಾದರೆ, ಈ ವಿಮೋಚನೆಯ ಕಾರ್ಯವನ್ನು ಮಾಡಲು ದೇವರು ನಾನೂರು ವರ್ಷಗಳ ಕಾಲ ತಡಮಾಡಿದ್ದೇಕೆ? ಎಂದು ಒಬ್ಬನು ಪ್ರಶ್ನಿಸಬಹುದು.

ದೇವರು ತನ್ನ ಮಾತನ್ನು ಈ ಹಿಂದೆಯೇ ನೆರವೇರಿಸಬಹುದಿತ್ತಲ್ಲವೇ? ಸಾಧ್ಯತೆಗಳಿದ್ದರೂ, ದೇವರು ಆ ಸಮಯವನ್ನು ಆಯ್ದುಕೊಳ್ಳಲಿಲ್ಲ. ದೇವರು ತಾನು ಮಾಡುವ ಕ್ರಿಯೆಗಾಗಿ ಸಮಯವನ್ನು ಆಯ್ದುಕೊಳ್ಳುವದು, ಆತನ ಹಕ್ಕಿಗೆ ಮೀಸಲಾಗಿದೆ, ಮತ್ತು ನಾವುಗಳು ಆತನ ಜ್ಞಾನವನ್ನು ಒಪ್ಪಿಕೊಳ್ಳಬೇಕು. ನಾವು ಆತನ ಕ್ರಿಯೆಗಳಿಗಾಗಿ ಕಾಯ್ದುಕೊಳ್ಳುವಾಗ, ಆತನಲ್ಲಿ ಭರವಸವುಳ್ಳವರಾಗಿರಬೇಕು. ಕ್ರೈಸ್ತರು ಈ ದಿನಗಳಲ್ಲಿ ಕಾಯುತ್ತಿರುವಂತೆ, ಇಸ್ರಾಯೇಲ್ಯರು ಆ ದಿನಗಳಲ್ಲಿ ಕಾಯುವವರಾಗಿದ್ದರು. ಮೋಶೆಯು ಗತಿಸಿದ ನಂತರ ಒಂದು ಸಾವಿರ

ವರ್ಷಗಳ ನಂತರ ಯೇಸು ಬಂದನು, ಅವನು ಅಂತಿಮವಾದ ವಿಮೋಚಕನಾಗಿದ್ದನು. ಯೇಸುವಿನ ಅನುಯಾಯಿಗಳು, ಆತನ ಪುನರಾಗಮನಕ್ಕಾಗಿ ಸುಮಾರು ಎರಡು ಸಾವಿರ ವರ್ಷಗಳಿಂದ ಕಾಯುತ್ತಲೇ ಇರುವರು. ದೇವರು ತಾನು ಮಾಡಬೇಕಾದ ಕಾರ್ಯಕ್ಕಾಗಿ ಯಾವ ಸಮಯವನ್ನು ಆರಿಸಿಕೊಳ್ಳುವನು ಎಂಬುದನ್ನು ನಮಗೆ ತಿಳಿಸಲಾಗಿರುವದಿಲ್ಲ. ಆದರೆ ನಾವುಗಳು ಭರವಸದಿಂದಿರಬೇಕಷ್ಟೆ.

ದೇವರ ವಾಗ್ದಾನಗಳು ನೆರವೇರಿಕೆಗಾಗಿ, ಬಹಳಷ್ಟು ಕಾಯುವಾಗ, ನಾವುಗಳು ಯೆಹೋಶುವ 1:5ರ ಮಾತುಗಳನ್ನು ನೆನಪಿಸಿಕೊಳ್ಳಬೇಕು. ಮೋಶೆಯ ಮರಣದ ನಂತರ ಇಸ್ರಾಯೇಲ್ಯರನ್ನು ಮುನ್ನಡೆಸಲು ದೇವರು ಯೆಹೋಶುವನನ್ನು ಆಯ್ದುಕೊಂಡನು, ಅವನು ಅವರನ್ನು ವಾಗ್ದಾನದ ದೇಶಕ್ಕೆ ನಡೆಸಬೇಕಿತ್ತು. ಆ ದೇಶವನ್ನು ವಶಪಡಿಸಿಕೊಳ್ಳುವದು ದೊಡ್ಡ ಹೋರಾಟವಾಗಿತ್ತು. ಇಸ್ರಾಯೇಲ್ ಜನರನ್ನು ಈ ವಿಧವಾದ ಹೋರಾಟಕ್ಕೆ ಕರೆಯುವುದು ಅಪಾಯದ ಸಂಗತಿಯಾಗಿತ್ತು ಮತ್ತು ಮೋಶೆಯ ಹೆಜ್ಜೆಯ ಜಾಡಿನಲ್ಲಿ ನಡೆಯುವದು ಆ ಯೌವನಸ್ಥನಿಗೆ ಕಷ್ಟಕರವಾದ ಸಂಗತಿಯಾಗಿತ್ತು. ಆಗ ದೇವರು ಅವನಿಗೆ ವಾಗ್ದಾನ ಮಾಡಿ, "ನಿನ್ನ ಜೀವಮಾನದಲ್ಲೆಲ್ಲಾ ಒಬ್ಬನೂ ನಿನ್ನ ಮುಂದೆ ನಿಲ್ಲನು; ನಾನು ಮೋಶೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡಲೂ ಇರುವೆನು" ಅಂದನು.

ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನದ ಒಂದು ಭಾಗವು ಈಗ ನೆರವೇರುವದಕ್ಕಿತ್ತು. ಈಗ ದೇವರು ಅಬ್ರಹಾಮನ ಸಂತತಿಯನ್ನು ದೊಡ್ಡ ಜನಾಂಗವನ್ನಾಗಿ ಮಾಡಿದ್ದನು, ಅವರನ್ನು ಐಗುಪ್ತರ ಬಂಧನದಿಂದ ಬಿಡಿಸಿದ್ದನು. ಮುಂದೆ, ಆತನ ವಾಗ್ದಾನ ಮಾಡಿದ ದೇಶವನ್ನು ಇಸ್ರಾಯೇಲ್ಯರು ವಶಪಡಿಸಿಕೊಳ್ಳುವಂತೆ ಮಾಡಿದ್ದನು. ಹೌದು ದೇವರು ತನ್ನ ಮಾತನ್ನು ಈಡೇರಿಸುತ್ತಾನೆ.

## ಇತರೆ ದೇವರುಗಳಿಗಿಂತ ಮಹತ್ವದ ದೇವರು

ಶತಮಾನಗಳ ನಂತರ, ವಿಗ್ರಹಗಳಿಗೆ ನೈವೇದ್ಯ ಮಾಡಿದ ಆಹಾರವನ್ನು ಸೇವಿಸುವ ವಿಚಾರದಲ್ಲಿ ಪೌಲನು ಈ ಕೆಳಕಂಡ ಸಲಹೆಗಳನ್ನು ಮುಂದಿಟ್ಟಿರುವನು:

> ವಿಗ್ರಹಗಳಿಗೆ ನೈವೇದ್ಯಮಾಡಿದ ಪದಾರ್ಥಗಳನ್ನು ತಿನ್ನುವದರ ವಿಷಯದಲ್ಲಿ ನಾನು ಹೇಳುವದೇನೆಂದರೆ - ಜಗತ್ತಿನಲ್ಲಿ ವಿಗ್ರಹವು ಏನೂ ಅಲ್ಲವೆಂದೂ ಒಬ್ಬ ದೇವರಿದ್ದಾನೆ ಹೊರತು ಬೇರೆ ದೇವರಿಲ್ಲವೆಂದೂ ಬಲ್ಲೆವು. ಅನೇಕರನ್ನು ದೇವರುಗಳೆಂದೂ ಕರ್ತರೆಂದೂ ಪೂಜಿಸುವದುಂಟು ನಿಜವೇ; ಆಕಾಶದಲ್ಲಿಯಾಗಲಿ ಭೂಮಿಯ ಮೇಲೆಯಾಗಲಿ ದೇವರುಗಳೆನಿಸಿಕೊಳ್ಳ ವವರಿದ್ದಾರೆ, ನಮಗಾದರೋ ಒಬ್ಬನೇ ದೇವರಿದ್ದಾನೆ; ಆತನು ತಂದೆಯೆಂಬಾತನೇ; ಆತನು ಸಮಸ್ತಕ್ಕೂ ಮೂಲಕಾರಣನು; ನಾವು ಆತನಿಗಾಗಿ ಉಂಟಾದೆವು. ಮತ್ತು ನಮಗೆ ಒಬ್ಬನೇ ಕರ್ತ; ಆತನು ಯೇಸು ಕ್ರಿಸ್ತನೇ; ಆತನ ಮುಖಾಂತರ ಸಮಸ್ತವೂ ಉಂಟಾಯಿತು, ನಾವೂ ಆತನ ಮುಖಾಂತರ ಉಂಟಾದೆವು (1 ಕೊರಿಂಥ 8:4-6).

ನಿಶ್ಚಯವಾಗಿಯೂ ಒಬ್ಬನೇ ಸತ್ಯ ದೇವರು ಇರುವದಾದರು; ಆತನಿಗೆ ಪೈಪೋಟಿ ನೀಡಲು ಕೆಲವು "ದೇವತೆಗಳನ್ನು" ಜನರು ಆಯ್ದುಕೊಂಡಿರುವರು (ದೇವತೆಗಳು). ಪುರಾತನ ಲಿಖಿತಗಳ ಪ್ರಕಾರ, ಐಗುಪ್ತರು ನಾಲ್ವತ್ತು ವಿಧಗಳ ದೇವತೆಗಳನ್ನು ಪೂಜಿಸುತ್ತಿದ್ದರು, ಒಂದು ವೇಳೆ ಅಧಿಕವಾದ ದೇವತೆಗಳಿರಬಹುದು. ಆದರೆ, ಇಸ್ರಾಯೇಲ್ಯರ ಐಗುಪ್ತ ದೇಶದ ವಿಮೋಚನೆಯ ಮೂಲಕ, ಇಸ್ರಾಯೇಲ್ಯರ ದೇವರು, ಇತರರ ದೇವತೆಗಳಿಗಿಂತ ಮಹತ್ವದ ದೇವರು ಎಂದು ರುಜುವಾತುಗೊಂಡಿತು.

ದೇವರ ಸೇವೆಯನ್ನು ಮಾಡುವದರಿಂದ ತಪ್ಪಿಸಿಕೊಳ್ಳಲು ಮೋಶೆಯು ಯತ್ನಿಸಿದಾಗ,

ಅವನು ಒಂದು ಪ್ರಶ್ನೆಯನ್ನು ದೇವರ ಮುಂದಿಟ್ಟನು: "ನಾನು ಇಸ್ರಾಯೇಲ್ಯರ ಬಳಿಗೆ ಬಂದು ನಿಮ್ಮ ಪಿತೃಗಳ ದೇವರು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆಂದು ಹೇಳಿದಾಗ ಅವರು ಒಂದು ವೇಳೆ - ಆತನ ಹೆಸರೇನೆಂದು? ನನ್ನನ್ನು ಕೇಳಿದರೆ ನಾನೇನು ಉತ್ತರ ಕೊಡಬೇಕು?" ಅಂದನು (ವಿಮೋಚನಕಾಂಡ 3:13). ಇಸ್ರಾಯೇಲ್ಯರು ಯಾವ ದೇವರನ್ನು ಆರಾಧಿಸಬೇಕಿತ್ತೊ, ಆ ದೇವರ ಹೆಸರನ್ನು ಅವರು ತಿಳಿಯ ಬಯಸಿದರು ಎಂದು ಮೋಶೆಯು ತಿಳಿಸಿದನು ಯಾಕೆಂದರೆ, ಐಗುಪ್ತರು ವಿವಿಧ ದೇವತೆಗಳನ್ನು ಪೂಜಿಸುತ್ತಿದ್ದರು, ಅವುಗಳಿಗೆ ವಿಶಿಷ್ಟವಾದ ಹೆಸರುಗಳಿದ್ದವು, ಆದ್ದರಿಂದ ಇಸ್ರಾಯೇಲ್ಯರು ತಮ್ಮ ದೇವರ ಹೆಸರನ್ನು ತಿಳಿಯಬಯಸಿದರು. ದೇವರ ಉತ್ತರವನ್ನು ಈ ಕೆಳಗೆ ನೀಡಲಾಗಿದೆ:

> ನಾನೇನು ಉತ್ತರಕೊಡಬೇಕು ಎನ್ನಲು ದೇವರು ಅವನಿಗೆ - ಇರುವಾತನೇ ಆಗಿದ್ದೇನೆ. ನೀನು ಇಸ್ರಯೇಲ್ಯರಿಗೆ - ಇರುವಾತನೆಂಬುವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದನು ಎಂದು ಹೇಳಬೇಕು. ದೇವರು ಮೋಶೆಗೆ ಮತ್ತೂ ಹೇಳಿದ್ದೇನಂದರೆ - ನೀನು ಇಸ್ರಾಯೇಲ್ಯರಿಗೆ ನಿಮ್ಮ ಪಿತೃಗಳಾದ ಅಬ್ರಹಾಮ ಇಸಾಕ ಯಾಕೋಬರ ದೇವರಾಗಿರುವ ಯೆಹೋವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆ ಎಂದು ಹೇಳಬೇಕು. ಇದು ಸದಾಕಾಲಕ್ಕೂ ನನ್ನ ಹೆಸರು; ಇದು ತಲಾತಲಾಂತಕ್ಕೂ ನನ್ನನ್ನು ಸ್ಮರಿಸಬೇಕಾದ ನಾಮ (ವಿಮೋಚನಕಾಂಡ 3:14, 15).

"ನಾನು ಇರುವಾತನೇ" ಅದು ಇಬ್ರಿಯ ಹೇಳಿಕೆಯಾಗಿದ್ದು "ನಾನು ನಾನೇ ಆಗಿದ್ದೇನೆ" ಎಂಬ ಅರ್ಥವಾಗಿದೆ. ಅಥವಾ "ನಾನು ಮುಂದೆಯೂ ಇರುವಾತನು" ಇಬ್ರಿಯ ಕ್ರಿಯಾಪದದಲ್ಲಿ "ಯೆಹೋವ" ಅದಕ್ಕೆ ಸಮಾನವಾದ ಪದವಲ್ಲ. ಇಬ್ರಿಯ ಪುರಾತನ ಪದಗಳಂತೆ ಅದರಲ್ಲಿ ಸ್ವರಗಳಿಲ್ಲ, ಆದ್ದರಿಂದ ಆ ಹೆಸರನ್ನು ಸರಿಯಾಗಿ ಉಚ್ಚರಿಸಲು ಸಾಧ್ಯವಿಲ್ಲ. "ಯಾವ್ಹೆ" ಎಂಬುದು ಉತ್ತಮ ಊಹೆಯಾಗಿದೆ (ಕೆಲವು ಸಾರಿ ಅದನ್ನು "ಯೆಹೋವ" ಎಂದು ಉಚ್ಚರಿಸಲಾಗಿದೆ).[2]

"ಯಾವ್ಹೆ" ಅಂದರೇನು? ದೇವರು ಏಕೆ ತನ್ನ ಹೆಸರನ್ನು ಕ್ರಿಯಾಪದದಲ್ಲಿ ತಿಳಿಸಿರುವನು? ಅದರ ಅರ್ಥ. "ಸತ್ಯವಾಗಿರುವ ದೇವರು, ಇರುವವನು ಹಾಗೂ ಇರುವಾತನೇ." ದೇವರು ಆತನು ನಿರೂಪಿಸಿಕೊಳ್ಳುವವನು, ಆತನು ಆತನೇ. ಈ ಕಾರಣದಿಂದ ಆತನಿಗೂ ಹಾಗೂ ಐಗುಪ್ತರ ಇತರೆ ಸುಳ್ಳು ದೇವತೆಗಳ ನಡುವೆ ವ್ಯತ್ಯಾಸವನ್ನು ಕಾಣುತ್ತೇವೆ (ಇತರೆ ವಿಗ್ರಹಗಳಿಗೂ). ವಿಗ್ರಹಗಳನ್ನು ಅವರ ಆರಾಧಕರೇ ನಿರ್ಮಿಸ ಬೇಕು, ಅದನ್ನು ಚಲಿಸಬೇಕು, ಅವುಗಳಿಗಾಗಿ ಮಾತನಾಡಿ, ಅವುಗಳಿಗೆ ಕಾಳಜಿ ವಹಿಸಬೇಕು (ಯೆಶಾಯ 44:9-20 ನೋಡಿರಿ). ಇಸ್ರಾಯೇಲ್ಯರ ದೇವರು ಮಾತ್ರ ಸತ್ಯವಾದ ಮತ್ತು ಒಬ್ಬನೇ ದೇವರಾಗಿದ್ದನು. ಆತನ ಸೃಷ್ಟಿಗಳು, ತನ್ನ ಉಳಿವಿಕೆಗಾಗಿ, ಅಗತ್ಯಗಳಿಗಾಗಿ, ಆತನನ್ನೇ ಅವಲಂಭಿಸಿದ್ದವು. ದೇವರು ತಾನೇ ದೇವರು ಆ ಹೆಸರನ್ನು ಹೊಂದಿಕೊಳ್ಳಲು ತಾನೊಬ್ಬನೇ ಅರ್ಹನು ಎಂದು ಸಾದರ ಪಡಿಸಿದ್ದನು.

ಫರೋಹನನ ಕಾಠಿಣ್ಯದ ನಿಮಿತ್ತ, ದೇವರು ಕಳುಹಿಸಿದ ಹತ್ತು ಪಿಡುಗುಗಳು ಐಗುಪ್ತರ ದೇವತೆಗಳಿಗಿಂಥ, ಇಸ್ರಾಯೇಲ್ಯರ ದೇವರು ಪರಾಕ್ರಮಿಯಾದವನು ಎಂದು ಸಾಬೀತು ಪಡಿಸಿತು. ಯಾಕೆಂದರೆ ನೈಲ್ ನದಿಯು ತುಂಬಿ ಹರಿಯುತ್ತಾ ಐಗುಪ್ತದ ಭೂಮಿಯನ್ನು ಫಲವತ್ತಾಗಿ ಮಾಡುತ್ತಾ ಜನರಿಗೆ ಜೀವನಾಡಿಯಾಗಿದ್ದರಿಂದ ಅದನ್ನು ದೇವರೆಂದು ಐಗುಪ್ತರು ಪರಿಗಣಿಸಿದ್ದರು. ಕಪ್ಪೆಗಳು ಆ ನದಿಯಿಂದ ಭೂಮಿಗೆ ಯಾವಾಗಲೂ ಬರುತ್ತಿದ್ದರಿಂದ ಅವುಗಳನ್ನು ದೇವರೆಂದು ಪರಿಗಣಿಸಿದ್ದರು. ನಂತರ ಕೊಳೆಯುವಂಥ ವಸ್ತುಗಳಿಂದ ಉದ್ಭವಿಸುತ್ತಿದ್ದ ನೊಣಗಳನ್ನು ದೈವೀಕ ಎಂದು ಭಾವಿಸಿದ್ದರು. ಜನರು ಫರೋಹನನ್ನು ದೇವರೆಂದು ತಿಳಿದು ಅವನನ್ನು ಆರಾಧಿಸುತ್ತಿದ್ದರು. ಆ ಅಪತ್ತುಗಳಿಂದ

ಐಗುಪ್ತರು ಹೀನ ಸ್ಥಿತಿಗೆ ಇಳಿದು ಹೋದದರಿಂದ, ಅವರು ಪೂಜಿಸುತ್ತಿದ್ದ ದೇವತೆಗಳ ಬಗ್ಗೆ ಅವರಿಗೆ ಸಂಶಯ ಉಂಟಾಯಿತು.

ಮೋಶೆಯು, ಫರೋಹನನ್ನು ಪ್ರಥಮ ಸಾರಿ ಸಂಧಿಸಿ, ಅವನ ಜನರನ್ನು ಕಳುಹಿಸ ಬೇಕೆಂದು ಮನವಿ ಮಾಡಿಕೊಂಡಾಗ, ಅವನ ಪ್ರತಿಕ್ರಿಯೆಯು ವಿರುದ್ಧವಾಗಿತ್ತು, ಕರ್ತನೆಂಬುವವನು ಯಾರು? ನಾನು ಅವನ ಮಾತನ್ನು ಕೇಳಿ ಇಸ್ರಾಯೇಲ್ಯರನ್ನೂ ಹೋಗ ಗೂಡಿಸುವದೇಕೆ? ಕರ್ತನು ಯಾರೋ ನನಗೆ ಗೊತ್ತಿಲ್ಲ. ಇಸ್ರಾಯೇಲ್ಯರು ಹೊರಟು ಹೋಗುವದಕ್ಕೆ ನಾನು ಒಪ್ಪುವದೇ ಇಲ್ಲ ಅಂದನು (ವಿಮೋಚನಕಾಂಡ 5:2). ಆ ಪಿಡುಗುಗಳು ಅಂತ್ಯವಾಗುವದರೊಳಗಾಗಿ, ಆ ದೇವರು ಯಾರು ಎಂದು ಫರೋಹನ ಹಾಗೂ ಅವನ ಸಹಚರರು ಅರಿತುಕೊಂಡಿದ್ದರು: ಆತನು "ಸರ್ವದೇವರುಗಳಲ್ಲಿ" ಅತಿ ಭಲಿಷ್ಟನು, ಫರೋಹನು ಸಹ ಆತನಿಗೆ ಅಡ್ಡಬೀಳ ಬೇಕು ಎಂದು ಅರಿತು ಕೊಂಡನು. ಫರೋಹನ ಚೊಚ್ಚಲು ಮಗನು ತೀರಿಕೊಂಡ ನಂತರ ಫರೋಹನಿಗೆ ಈ ಅರಿವು ಉಂಟಾಯಿತು.

"ಇರುವಾತನೆ" ನಿನ್ನನ್ನು ಇಸ್ರಾಯೇಲ್ಯರ ಬಳಿಗೆ ಕಳುಹಿಸಿದ್ದಾನೆ ಎಂದು ಹೇಳು ಎಂಬುದನ್ನು ದೇವರು ಮೋಶೆಗೆ ಸೂಚಿಸಿದಾಗ (3:14). ಅವನೇ ನಿಜ ದೇವರು, ಅವರು ಆತನನ್ನೇ ನಂಬಬೇಕು, ಇತರೆ ದೇವತೆಗಳು ಸುಳ್ಳು ದೇವತೆಗಳೇ ಎಂಬ ಅರ್ಥವನ್ನು ನೀಡಲಾಯಿತು (2 ಪೂರ್ವಕಾಲವೃತ್ತಾಂತ 13:9; ಅಪೊಸ್ತಲ ಕೃತ್ಯಗಳು 19:26; ಗಲಾತ್ಯ 4:8). ಯಾಕೆಂದರೆ ನಾವಿರುವ ಲೋಕದಲ್ಲಿ ಪೈಪೋಟಿಗಾಗಿ ಅನೇಕ ದೇವತೆಗಳಿವೆ (ಅಂದರೆ, ಐಶ್ವರ್ಯ, ಆಶೆ, ತಾಂತ್ರಿಕವೇ, ಸೈನ್ಯ ಹಾಗೂ ರಾಜಕೀಯ ಶಕ್ತಿಗಳು), ನಾವು ಮಾಡಬೇ ಕಾದದ್ದು ಇಷ್ಟೇ, ನಮ್ಮ ಪಾಪಗಳಿಗಾಗಿ ವಿಮೋಚನೆಯನ್ನು, ರಕ್ಷಣೆಯನ್ನು ನೀಡುವವನು ಒಬ್ಬನೇ ಆತನನ್ನು ನಾವುಗಳು ಅರಿಯಬೇಕು.

## ಪರಿಶುದ್ಧನಾಗಿರುವ ದೇವರು

ಉರಿಯುತ್ತಿರುವ ಮುಳ್ಳಿನ ಪೊದೆಯ ಬಳಿಗೆ ಮೋಶೆಯು ಸಮೀಪಿಸುವಾಗ, ದೇವರು ಅವನಿಗೆ, ನೀನು ಹತ್ತಿರ ಬರಬೇಡ; "ನಿನ್ನ ಕಾಲಿನ ಕೆರಗಳನ್ನು ತೆಗೆದು ಹಾಕು; ನೀನು ನಿಂತಿರುವ ಸ್ಥಳವು ಪರಿಶುದ್ಧ ಭೂಮಿ ಎಂದು ಹೇಳಿದನು" (ವಿಮೋಚನಕಾಂಡ 3:5) ಕಾರಣ ದೇವರ ಸನ್ನಿಧಿಯು ಆ ಸ್ಥಳದಲ್ಲಿ ಇದ್ದಿದ್ದರಿಂದ, ಮೋಶೆಯು ನಿಂತಿದ್ದ ಸ್ಥಳವು ಸಹ ಪರಿಶುದ್ಧವಾಗಿತ್ತು. ಆತನ ಪರಿಶುದ್ಧತೆ ಅಂದರೆ, ಆತನ "ಇನ್ನೊಂದು ಸ್ವಭಾವವೇ" ಆತನು ತನ್ನದೇ ಆದ ವರ್ಗದಲ್ಲಿರುವನು; ಆತನು ನಮ್ಮ ಹಾಗೆ ಇರುವವವನಲ್ಲ, ಆತನು ಆಹ್ವಾನಿಸಿದರೆ, ಮತ್ತು ಆತನ ಸೂಚನೆಗನುಗುಣವಾಗಿ ಮಾತ್ರ ಆತನನ್ನು ಸಂಧಿಸಬಹುದು. ಅವರು ದೇವರಿಲ್ಲದೆ ದೀರ್ಘಕಾಲವಾದ ನಂತರ, ಇಸ್ರಾಯೇಲ್ಯರು ದೇವರ ವಿಚಾರದಲ್ಲಿ ಗಂಭೀರ ತನವನ್ನು ಹೊಂದಬೇಕಾಯಿತು. ಆತನು ಅವರಿಗೆ ಮಾರ್ಗದರ್ಶನ ನೀಡಿದಾಗ ಮಾತ್ರ ಅವರು ದೇವರನ್ನು ಸಂಧಿಸಲು ಸಾಧ್ಯವಾಯಿತು.

ವಿಮೋಚನ ಕಾಂಡದ ಕೊನೆಯ ಹದಿನೈದು ಅಧ್ಯಾಯಗಳು ಪರಿಶುದ್ಧತೆಯ ಬಗ್ಗೆ ಬರೆಯಲ್ಪಟ್ಟಿದೆ. ಇವುಗಳಲ್ಲಿ ದೇವದರ್ಶನದ ಗುಡಾರದ ವಿವರವನ್ನು ದೇವರು ನೀಡಿರುವನು (ದೇವರ ಆರಾಧನೆಗೆ ತಾತ್ಕಾಲಿಕವಾದ ಗುಡಾರ), ಅದರಲ್ಲಿ ನಡೆಯಬೇಕಾದ ಯಜ್ಞಗಳು, ಯಾಜಕತ್ವ (ಯಾಜಕರ ವಸ್ತ್ರಗಳು), ಮತ್ತು ದೇವದರ್ಶನ ಗುಡಾರದಲ್ಲಿ ಇರಬೇಕಾದ ಪಿಠೋ ಪಕರಣಗಳ ವಿವರಗಳಿವೆ. ಆ ವಸ್ತುಗಳನ್ನು ಯಾವ ಕಚ್ಚಾ ಸಾಮಾಗ್ರಿಯಿಂದ ತಯಾರಿಸಬೇಕು ಎಂಬ ವಿವರಗಳನ್ನೂ ನೀಡಲಾಗಿದೆ. ಅವೆಲ್ಲವುಗಳು "ಅನಗತ್ಯ" ಎಂದು ತೋಚಬಹುದು, ಆದರೆ ಇಸ್ರಾಯೇಲ್ಯರಿಗೆ ಅದು ಅವರ ದೇವರ ಸ್ವಭಾವವನ್ನು ತೋರುತ್ತಿತ್ತು. ಈ ಕ್ರಮಗಳ ನಿಮಿತ್ತ ಅವರು ಅವರ ದೇವರನ್ನು ಬಹು ಗೌರವದಿಂದ ಕಾಣಬೇಕಿತ್ತು ಎಂಬ ಸೂಚನೆಯನ್ನು ಗಮನಿಸುತ್ತೇವೆ.

ಅನೇಕ ಸಾರಿ, ಕ್ರೈಸ್ತರು ತಾವು ಹಳೇ ಒಡಂಬಡಿಕೆಗೆ ಸಂಬಂಧಪಟ್ಟವರಲ್ಲ ಎಂದು ತಿಳಿದು, ನಾವು ಪರಿಶುದ್ಧತೆಯನ್ನು ಅಲಕ್ಷಮಾಡುವವರಾಗಿದ್ದೇವೆ, ಹಾಗೂ ಆರಾಧನೆಯಲ್ಲಿ ಮಾನ್ಯತೆಯನ್ನು ನೀಡುವದಿಲ್ಲ. ಇದು ವಿಶಿಷ್ಟವಾದ ಪ್ರಸ್ತಾಪವೇ, ಇದನ್ನು ನಂಬುವದಕ್ಕೆ ಯಾವುದೇ ವಾಕ್ಯಾಧಾರಗಳಿರುವದಿಲ್ಲ. ಯೇಸುವಿನ ಶಿಲುಬೆಯ ಅಗತ್ಯ ಉಂಟಾಯಿತು. ಪಾಪಕ್ಕೆ ಪ್ರಾಯಶ್ಚಿತ್ತವಾಗಬೇಕಿತ್ತು; ಅದನ್ನು ಸುಲಭವಾಗಿ ಅಲಕ್ಷ ಮಾಡುವಂತಿರಲಿಲ್ಲ. ನಾವು ಪೂರ್ವಿಕವಾದ ಇಸ್ರಾಯೇಲ್ಯರ ಆರಾಧನೆಯನ್ನು ಅನುಸರಿಸುವ ಅಗತ್ಯವಿಲ್ಲ. ಆದರೆ ಆರಾಧನೆಯ ಮನೋಭಾವವು ಅವರಂತೆಯೇ ಇರಬೇಕು.

ದೇವರು ಪರಿಶುದ್ಧನೇ ಎಂದು ವಿಮೋಚನ ಕಾಂಡವು ತಿಳಿಸುವದರಿಂದ, ಆತನು ನಾಶನವನ್ನು ಮಾಡನು ಎಂದು ಹೇಳುವದು ಅಸಾಧ್ಯ. ಆ ಮೊದಲ ಭೇಟಿಯಲ್ಲಿ ಫರೋಹನು ಮೋಶೆಗೆ ಆ ದೇವರು ಯಾರು ಎಂಬ ಪ್ರಶ್ನೆಯಿಂದ ಬೀಳ್ಕೊಟ್ಟನು. ಆತನ ಸ್ವರವನ್ನು ಕೇಳಿ ಏಕೆ ನಾನು ಇಸ್ರಾಯೇಲ್ಯರನ್ನು ಬಿಡಬೇಕು? ಎಂದನು (ವಿಮೋಚನಕಾಂಡ 5:2). ವಿಮೋಚನಕಾಂಡದ ಮುಖ್ಯ ಪ್ರಶ್ನೆಯು ಇದೇ ಆಗಿರುತ್ತದೆ: ಆ ದೇವರು ಯಾರು? ಫರೋಹನು ತನ್ನ "ಹೃದಯವನ್ನು ಕಠಿಣ" ಮಾಡಿಕೊಂಡದ್ದರಿಂದಲೇ ಪಾಠವನ್ನು ಅವನು ಕಲಿತನು (ವಿಮೋಚನಕಾಂಡ 8:15, 32). ದೇವರು ಈ ರೀತಿ ಆಗುವದೆಂದು ಮುಂದಾಗಿ ತಿಳಿಸಿದ್ದನು. ಕಡೇಯ ಸಾರಿ ಫರೋಹನು ತನ್ನ ಹೃದಯವನ್ನು ಕಠಿಣಮಾಡಿಕೊಂಡು ಇಸ್ರಾಯೇಲ್ಯರನ್ನು ಕೆಂಪು ಸಮುದ್ರದ ಬಳಿ ಸಿಲುಕಿಸಿದಾಗ, ದೇವರು ಮೋಶೆಗೆ:

> ನಾನಂತೂ ಐಗುಪ್ತ್ಯರ ಹೃದಯಗಳನ್ನು ಕಠಿಣಪಡಿಸುವೆನಾದದರಿಂದ ಅವರು ಇವರ ಹಿಂದೆ ಸಮುದ್ರದೊಳಗೆ ಹೋಗುವರು; ಆಗ ನಾನು ಫರೋಹನಲ್ಲಿಯೂ ಅವನ ಸಮಸ್ತ ಸೈನ್ಯದಲ್ಲಿಯೂ ರಥಗಳಲ್ಲಿಯೂ ಕುದುರೆಗಳಲ್ಲಿಯೂ ಪ್ರಖ್ಯಾತಿಗೊಳ್ಳುವೆನು. ನಾನು ಫರೋಹನಲ್ಲಿಯೂ ಅವನ ರಥಗಳಲ್ಲಿಯೂ ಕುದುರೆಗಳಲ್ಲಿಯೂ ಪ್ರಖ್ಯಾತಿಹೊಂದಿದ ನಂತರ ನಾನು ಯೆಹೋವನು ಎಂಬುದನ್ನು ಐಗುಪ್ತ್ಯರು ತಿಳುಕೊಳ್ಳುವರು ಅಂದನು (ವಿಮೋಚನಕಾಂಡ 14:17, 18).

ದೇವರ ನ್ಯಾಯ ನಿರ್ಣಯವನ್ನು ನೋಡಿದ ಐಗುಪ್ತರು, ದೇವರು ದೇವರೆ ಎಂಬ ಪಾಠವನ್ನು ಇದರಿಂದ ಕಲಿತರು. ಆದ್ದರಿಂದ ಇಸ್ರಾಯೇಲ್ಯರು ಶಿಕ್ಷೆಯನ್ನೂ ಅನುಭವಿಸುವದರ ಮೂಲಕ ಪಾಠವನ್ನು ಕಲಿಯಬೇಕೆಂದು ದೇವರು ಬಯಸಲಿಲ್ಲ, ಆದ್ದರಿಂದ ಈ ಅಪಾಯಗಳ ಮೂಲಕ ದೇವರು ಅವರಿಗೆ ಪರಿಶುದ್ಧತೆಯ ಕುರಿತು ಎಚ್ಚರಿಕೆಯನ್ನು ಹಾಗೂ ತಿಳುವಳಿಕೆಯನ್ನು ನೀಡಿದನು. ಹೊಸ ಒಡಂಬಡಿಕೆಯ ಪುಟಗಳ ಮುಖಾಂತರ ಆತನು ಸಭೆಗಳಿಗೆ ಎಚ್ಚರಿಕೆಯನ್ನು ನೀಡುವವನಾಗಿದ್ದಾನೆ. ಕ್ರೈಸ್ತರೆಲ್ಲರು ತಮ್ಮ ವರ್ತನೆಯಲ್ಲಿ ಹಾಗೂ ಪಾಪವನ್ನು ಹೇಸುವದರಲ್ಲಿ ದೇವರ ಪರಿಶುದ್ಧತೆಯನ್ನು ಪ್ರಕಟ ಪಡಿಸಬೇಕು ಎಂದು ತಿಳಿಸಲಾಗಿದೆ (ಉದಾಹರಣೆ 2 ಕೊರಿಂಥ 7:1; ಇಬ್ರಿಯ 10:26-31; 12:25-29; 1 ಪೇತ್ರ 1:15).

## ದೇವರು ತನ್ನ ಜನರನ್ನು ಕರೆದು ಅವರನ್ನು ತನ್ನ ಶಕ್ತಿಯಿಂದ ತುಂಬಿಸುತ್ತಾನೆ

ಇಸ್ರಾಯೇಲ್ಯರನ್ನು ಬಿಡುಗಡೆಗೊಳಿಸಲು ದೇವರು ಮೋಶೆಯನ್ನು ಕರೆದಾಗ, ಅವನಿಗೆ ಸಾಮರ್ಥ್ಯದ ಜೊತೆಗೆ, ಅದನ್ನು ಸಾಧಿಸುವಂತೆ ಬಲವನ್ನು ನೀಡಿದನು. ಅವನು ಜನರ ಬಳಿಗೆ ಹೋದಾಗ, ಅವರು ಅವನನ್ನು ಅನುಸರಿಸುವದಿಲ್ಲ ಎಂದು ಹೇಳಿದಾಗ ದೇವರು ಅವನಿಗೆ ಮಹತ್ಕಾರ್ಯಗಳನ್ನು ಮಾಡುವ ಸಾಮರ್ಥ್ಯವನ್ನು ನೀಡಿದನು: ಮೋಶೆಯ ಕೈಯಲ್ಲಿದ್ದ ಕೋಲನ್ನು ಹಾವಾಗುವಂತೆ ಪರಿವರ್ತಿಸಿದನು ಅವನ ಕೈಗಳನ್ನು ತೊನ್ನು ಹತ್ತಿ, ಗುಣವಾಗುವಂಥ ಪುರಾವೆಗಳನ್ನು ನೀಡಿದನು, ನೀರನ್ನು ರಕ್ತವಾಗುವಂತೆ ಮಾಡಿದನು (4:1-9). ನಂತರದಲ್ಲಿ ಅವನು ಮಾತಿನಲ್ಲಿ ಚತುರನಾಗಿರಲಿಲ್ಲ ಎನ್ನುವಾಗ, ದೇವರೇ ಮನುಷ್ಯರ

ಬಾಯಿಗಳನ್ನು ಮಾಡಿರುವವನು, ಮತ್ತು ತನಗಾಗಿ ಉತ್ತಮವಾಗಿ ಮಾತನಾಡುವಂತೆ ಮಾಡುವವನು ಎಂಬುದಾಗಿ ಸಾಭೀತು ಪಡಿಸಿದನು. ಅವನ ಸಂಗಡ ಸಹಾಯಕ್ಕಾಗಿ, "ಅವನ ಸಹೋದರನಾದ ಆರೋನನನ್ನು ಅವನಿಗಾಗಿ ಮಾತನಾಡಲು ಕಳುಹಿಸಿದನು" (4:10-17).

ನಂತರದಲ್ಲಿ, ಇಸ್ರಾಯೇಲ್ಯರು ಕೆಂಪುಸಮುದ್ರದ ಬಳಿಯಲ್ಲಿ ಸಂಕಷ್ಟಕ್ಕೆ ಸಿಲುಕಿಕೊಂಡಾಗ, ಮತ್ತು ಐಗುಪ್ತರ ರಾಹುತರುಗಳು ಅವರನ್ನು ಬೆನ್ನಟ್ಟಿದಾಗ, ಅವರು ತಪ್ಪಿಸಿಕೊಳ್ಳುವಂತೆ ದೇವರು ಅವರಿಗಾಗಿ ವಿಶೇಷ ಮಾರ್ಗವನ್ನು ಮಾಡಿದನು. ಅವರು ನಾಲ್ವತ್ತು ವರ್ಷಗಳ ಕಾಲ ಅರಣ್ಯದಲ್ಲಿ ಅಲೆದಾಡುತ್ತಿರುವಾಗ, ಅವರನ್ನು ಪೋಷಿಸಿ ಸಂರಕ್ಷಿಸಿದನು.

ಈಗಲೂ, ಸಹ ದೇವರು ತನ್ನ ಜನರನ್ನು ಕರೆದು, ಅವರನ್ನು ಬಲಪಡಿಸುವವನಾಗಿದ್ದಾನೆ. ಸಭೆಗಳನ್ನು ಪರಿಶುದ್ಧ ಜನಾಂಗವಾಗುವದಕ್ಕೆ ಕರೆದು, ಅವರು ಅವನ ಪ್ರೀತಿಯ ಹಾಗೂ ಅನುಕಂಪದ ಸಂದೇಶವನ್ನು ಲೋಕಕ್ಕೆ ಸಾರಬೇಕೆಂದು ಬಯಸುತ್ತಾನೆ. ಕೆಲಸವು ಕಷ್ಟಕ ವಾಗಿದ್ದರೂ, ತನ್ನ ಕೆಲಸವನ್ನು ನಾವುಗಳು ಪೂರ್ಣಮಾಡಲು ಬಲವನ್ನು ನೀಡುತ್ತಾನೆ. ಈ ಕಾರಣದಿಂದಲೇ ದೇವರು ಪರಿಶುದ್ಧಾತ್ಮನ ಬಲವನ್ನು ನೀಡಿ ಸಭೆಗಳನ್ನು ಆರಂಭಿಸಿರುವನು. ದೇವರು ಈ ಬಲವನ್ನು ನೀಡುವವರೆಗೆ, ಅಪೊಸ್ತಲರು ಬಲಹೀನರಾಗಿದ್ದರು. ದೇವರಾತ್ಮನು ಬಂದ ನಂತರ, ಸಕಲವೂ ಬದಲಾಯಿತು. ಈ ದಿನದಲ್ಲಿ ದೀಕ್ಷಾಸ್ನಾನ ಹೊಂದಿರುವ ಸಕಲ ದೇವ ಜನರ ಬಳಿಯಲ್ಲೂ, ಅದೇ ಆತ್ಮನು ಇರುವವನಾಗಿದ್ದಾನೆ, ಆದ್ದರಿಂದ ಅವರನ್ನು ತನ್ನ ಸೇವೆಗೆ ಸಿದ್ಧಪಡಿಸಿದ್ದಾನೆ (ಅಪೊಸ್ತಲರ ಕೃತ್ಯಗಳು 2:1-38). ನಾವು ದೇವರ ಸೇವೆ ಮಾಡುವದರಲ್ಲಿ ದೇವರಿಗೆ ಕಾರಣಗಳನ್ನು ನೀಡಬಾರದು, ನಾವು ಅದನ್ನು ಮಾಡುವಂತೆ ಆತನು ಸಹಾಯಿಸುತ್ತಾನೆ.

## ಮುಕ್ತಾಯ

ಯಾವಾತನು ತನ್ನ ಅದ್ಭುತವಾದ ಬಿಡುಗಡೆಗಾಗಿ, ಇಸ್ರಾಯೇಲ್ಯರನ್ನು ಕರೆದನೋ, ಆತನನ್ನು ಅವರು ನಂಬಿ ಭರವಸವಿಡಬೇಕೆಂಬ ಸವಾಲನ್ನು ಮೋಶೆಯು ಹೊಂದಿದ್ದನು. ಆತನೇ ಎಲ್ಲಾ ದೇವತೆಗಳಿಗಿಂತ "ಮಿಗಿಲಾದವನು," ಆತನು ತನ್ನ ವಾಗ್ದಾನಗಳನ್ನು ಈಡೇ ರಿಸುವವನು. ಆತನು ಪೂರ್ಣವಾಗಿ ಪರಿಶುದ್ಧನೇ. ತನ್ನ ಜನರನ್ನು ತನ್ನ ಸೇವೆ ಗಾಗಿ ಬಲಪಡಿಸುವವನು. ಈ ದಿನವು ಆತನು ದೇವರೇ ಆಗಿರುವದರಿಂದ, ಆತನನ್ನು ನಂಬಿ ವಿಧೇಯರಾಗುವದು ಸವಾಲಿನ ಸಂಗತಿಯಾಗಿದೆ.

---

ಟಿಪ್ಪಣಿ

[1]Paul R. House, *Old Testament Theology* (Downer's Grove, Ill.: InterVarsity, 1998), 92. [2]"ಯೆಹೋವ" ಎಂಬ ಹೆಸರು ಜರ್ಮನ್ ಭಾಷೆಯಲ್ಲಿ ದೂನ್ಯೆ, ಎಂಬ ಪದವನ್ನು ಹೊಂದಿದೆ.

---

## ಫರೋಹನ ಕಠಿಣತೆ

ದೇವರು ಫರೋಹನ ಹೃದಯವನ್ನು ಕಠಿಣಮಾಡಿದನು ಎಂಬ ಹೇಳಿಕೆಯು ಸತ್ಯವೇದದ ಓದುಗರಿಗೆ ಮುಜುಗರ ಉಂಟುಮಾಡುತ್ತದೆ. ಸಾಮಾನ್ಯ ಓದುಗರಿಗೆ, ಫರೋಹನಿಗೆ ದೇವರಿಂದ ಈ ಸಂಗತಿಯು ಮುಂದಾಗಿಯೇ ತಿಳಿಸಲ್ಪಟ್ಟಿತು ಎಂಬ ಭಾವನೆ ಮೂಡಬಹುದು. ದೇವರು ತನ್ನ ಪ್ರಭಾವವನ್ನು ತೋರ್ಪಡಿಸಲು ಈ ರೀತಿ ಮಾಡಿದನಷ್ಟೆ (ವಿಮೋಚನಕಾಂಡ

4:21). ಯಾರೂ ಸಹ ದೇವರಿಗೆ ತಿರುಗಿಬೀಳಲು ಸಾಧ್ಯವಿಲ್ಲ. ಆದರೆ ಫರೋಹನನಿಗೆ ಒಂದು ಅವಕಾಶವು ದೊರೆಯಲಿಲ್ಲವೇ? ದೇವರೇ ಅವನನ್ನು ಅವಿಧೇಯನನ್ನಾಗಿ ಮಾಡಿ, ಅವನಿಗೆ ಶಿಕ್ಷೆ ನೀಡಿದನು ಎಂಬ ಭಾಸವಾಗುತ್ತದೆ (ವಿಮೋಚನಕಾಂಡ 9:12; 10:20, 27; 11:10) "ಫರೋಹನ ಹೃದಯ ಕಠಿಣವಾಯಿತು; ಅದಕ್ಕೆ ಹೊಣೆ ಯಾರು ಎಂದು ತಿಳಿಸಿರುವದಿಲ್ಲ" (7:13, 22; 8:19; 9:7).

ಈ ಕಥೆಯಲ್ಲಿ ಫರೋಹನನು ಕಠಿಣನಾದನು ಮತ್ತು ಅವನೇ ಕೇಂದ್ರ ಬಿಂದುವಾದನು (ವಿಮೋಚನಾಕಾಂಡ 8:15, 32; 9:34; 14:5). ಆರಂಭದಿಂದಲೇ ಫರೋಹನು ಕೋಪಿಷ್ಟನು, ದುಷ್ಟ ಮನೋಭಾವದವನು ಆಗಿದ್ದು ಅದರ ಪರಿಣಾಮವನ್ನು ಅನುಭವಿಸಿದನು. ದೇವರು ಯಾರೊಂದಿಗೆ ವ್ಯವಹರಿಸುತ್ತಾನೋ, ಅವನನ್ನು ಆತನು ಅರಿತಿರುತ್ತಾನೆ. ಫರೋಹನ ಕಠಿಣತೆಯ ಮೂಲಕ ಐಗುಪ್ತಕ್ಕೆ ಮಾತ್ರ ಪಾಠ ಕಲಿಸದೆ ಇಸ್ರಾಯೇಲ್ಯರಿಗೂ ಸಹ ಪರಿಶುದ್ಧತೆಯ ಪಾಠವನ್ನು ಕಲಿಸಿದನು.

> ದೇವರು "ಕಠಿಣ ಮಾಡುತ್ತಾನೆ" ಅಂದರೆ ಕುರಿಯನ್ನು ಕತ್ತೆಯನ್ನಾಗಿ ಮಾರ್ಪಡಿಸುವದಿಲ್ಲ ಕತ್ತೆಗಳು ತಮ್ಮ ಕರ್ತವ್ಯವನ್ನು ಮಾಡಬೇಕೆಂದು ದೇವರು ಬಯಸುತ್ತಾನೆ. ಫರೋಹನು ತನ್ನ ಪಾಪದ ಪರಿಣಾಮವನ್ನು ಅನುಭವಿಸಿದನು (ವಿಮೋಚನಕಾಂಡ 9:34).[1]

---

ಟಿಪ್ಪಣಿ

[1]Stephen Westerholm, *Preface to the Study of Paul* (Grand Rapids, Mich.: Wm. B. Eerdmans Publishing Co., 1997), 105, n.13.